**ಓಎಸ್ ನಂಃ 313/2011 ಪಿ.ಡಬ್ಲ್ಯೂ- 1**

**ದಿನಾಂಕಃ 28.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಎನ್.ವಿ.ಆರ್. ವಕೀಲರಿಂದಃ

ನಿಮ್ಮ ತಂದೆ ಸಲ್ಲಿಸಿರುವ ದಾಖಲಾತಿಗಳಲ್ಲಿ ನಿಪಿ 1 ರಿಂದ 7 ರವರೆಗೆ ಹಕ್ಕು ಪತ್ರದಂತೆ ಖಾತೆ ಎಲ್ಲಿಯೂ ಇಲ್ಲ ಎಂದರೆ ನಮ್ಮ ತಂದೆ ಸಲ್ಲಿಸಿರುವ ದಾಖಲಾತಿ ನನಗೆ ಅದರ ಬಗ್ಗೆ ಗೊತ್ತಿಲ್ಲ. ನೀವು ಏನು ಕೆಲಸ ಮಾಡುತ್ತೀರಿ ಎಂದರೆ ವಕೀಲರು. ನಿಪಿ 1 ರಿಂದ 7 ರವರೆಗೆ ಹಕ್ಕು ಪತ್ರದಂತೆ ಖಾತೆ ನಮೂದು ಇರುತ್ತದೆಯಾ ಎಂದು ನೋಡಿ ಎಂದರೆ ಅದರಲ್ಲಿ ಎಲ್ಲಿಯೂ ನಮೂದು ಇಲ್ಲ ನಿಪಿ 1 ರಿಂದ 7 ಇತ್ತಿಚೆಗಿನ ದಾಖಲಾತಿಗಳು. ನಿಪಿ 8 ಮತ್ತು 9 ಎಲ್ಲಿಂದ ಪಡೆದಿರುತ್ತೀರಾ ಎಂದರೆ ನಮ್ಮ ತಂದೆ ಮೇಲ್ಮನವಿ ಸಲ್ಲಿಸಿದ್ದರು ಅದರಲ್ಲಿ ಇತ್ತು ಎನ್ನುತ್ತಾರೆ. ನಿಪಿ 8 ಮತ್ತು 9 ನಿಮ್ಮ ತಂದೆ ಸಲ್ಲಿಸಿರುವುದಿಲ್ಲ ನೀವೆ ಅರ್ಜಿ ಹಾಕಿ ಅಪೀಲಿನಲ್ಲಿ ಸಲ್ಲಿಸಿರುತ್ತೀರಿ ಎಂದರೆ ನಮ್ಮ ತಂದೆ ಸಲ್ಲಿಸಿರುತ್ತಾರೆ. ನಿಪಿ 9 ನ್ನು ಯಾವ ವರ್ಷದಲ್ಲಿ ಪಡೆದಿರುತ್ತೀರಿ ಎಂದರೆ ಸಾಕ್ಷಿ ನಮ್ಮ 11.09.1995 ರಲ್ಲಿ ಪಡೆದಿರುತ್ತಾರೆ. ನಿಪಿ 8 ಮತ್ತು 9 ಅನ್ನು ನೀವು ಸೃಷ್ಟಿ ಮಾಡಿಕೊಂಡು ಬಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 8 ರಲ್ಲಿ ಎರಡೂ ಬರವಣಿಗೆ ಇರುತ್ತದೆ ಬರವಣಿಗೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ಇಲ್ಲ. ನಿಪಿ 8 ಸ್ಪಷ್ಟವಾಗಿ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ನಿಪಿ 9 ರಲ್ಲೂ ಸಹ ಬೇರೆ ಬರವಣಿಗೆ ಇದ್ದರೂ ಹಕ್ಕು ಪತ್ರದಂತೆ ಖಾತೆ ಸಲ್ಲಿಸಿರುವುದು ಗೊತ್ತಾಗುತ್ತದೆ ಎಂದರೆ ಇಲ್ಲ ಎನ್ನುತ್ತಾರೆ. ಕಾರ್ಯ ನಿರ್ವಹಣಾ ಹುದ್ದೆ ಯಾವಗ ಪ್ರಾರಂಭ ಆಗಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. 1994 ರಲ್ಲಿ ಕ್ಷೇತ್ರ ಅಭಿವೃದ್ಧಿ ಆಧಿಕಾರಿಗಳು ಎಂದು ಇದ್ದರು ಗೊತ್ತಾ ಎಂದರೆ ಗೊತ್ತಿಲ್ಲ.

1996 ರಲ್ಲಿ ಕಾರ್ಯ ನಿರ್ವಹಣಾ ಹುದ್ದೆ ಪ್ರಾರಂಭ ಆಯಿತು ಗೊತ್ತಾ ಎಂದರೆ ಗೊತ್ತಿಲ್ಲ. ನಿಪಿ 8 ರಲ್ಲಿ ಕಾರ್ಯ ನಿರ್ವಹಣಾ ಅಧಿಕಾರಿ ತಾಲ್ಲೂಕು ಪಂಚಾಯಿತಿ ಎಂದು ಇರುತ್ತದೆ ಆದರೆ 1994 ರಲ್ಲಿ ಕ್ಷೇತ್ರಾಭಿವೃದ್ದಿ ಅಧಿಕಾರಿ ಎಂದು ಹುದ್ದೆ ಇತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 8 ಮತ್ತು 9 ನೈಜ ದಾಖಲೆಗಳಲ್ಲ ನೀವು ಸೃಷ್ಟಿ ಮಾಡಿಕೊಂಡು ಬಂದು ಹಾಕಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 8 ರಲ್ಲಿರುವ ಅಧಿಕಾರಿಗಳ ಸಹಿಯನ್ನು ನೀವೆ ನಕಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ 8 ಅನ್ನು ತಾಲೂಕು ಪಂಚಾಯಿತಿ ಮೂಲ ದಾಖಲಾತಿಗಳನ್ನು ತರಿಸುವುದರಿಂದ ನಿಮಗೆ ತೊಂದರೆ ಇಲ್ಲ ಎಂದರೆ ಇಲ್ಲ. ನಿಪಿ 8 ದಾಖಲಾತಿ ತಾಲೂಕು ಕಚೇರಿಯಲ್ಲಿ ಲಭ್ಯವಿಲ್ಲ ಎಂದರೆ ಗೊತ್ತಿಲ್ಲ. ನಿಪಿ 9 ಇರಗಂಪಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿಲ್ಲ ಎಂದರೆ ಗೊತ್ತಿಲ್ಲ. ನಿಪಿ 8 ಮತ್ತು 9 ರಂತೆ ಸದರಿ ಪಂಚಾಯಿತಿಯಲ್ಲಿ ದಾಖಲಾತಿ ಇರುವುದನ್ನು ಪರಿಶೀಲನೆ ಮಾಡಿರುತ್ತೀರಿ ಎಂದರೆ ಇಲ್ಲ. ನಿಪಿ 8 ಮತ್ತು 9 ಅನ್ನು ನೀವು ಸೃಷ್ಟಿ ಮಾಡಿಕೊಂಡು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ 8 ಮತ್ತು 9 ಪರಿಶಿಲನೆ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ. ನಮ್ಮ ತಂದೆ ಹೆಸರಿನಲ್ಲಿರುವ ಕಾರಣ ನಾವು ನೋಡಿಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.